

ಮಾಧವನಂಘ್ರಿ ನಿತ್ಯ ಮೋದದಲ್ಲಿ ಭಜಿಪ
ಸಾಧು ಸನ್ಮುನಿವರ್ಯ ಸಮ್ಮೋದ ತೀರ್ಥಕರಪಾದ
ಸಾದರದಿಂದ ಭಜಿಸಿ ಮೇದಿನಿಗೆ ಭಾರ
ವಾದ ಮಾಯಾವಾದಿಗಳ ಗೆದ್ದೆ

Madhavanangri nitya modadalli Bajipa
Sadhu sanmunivarya sammoda tirthakarapada
Sadaradinda Bajisi medinige bara
Vada mayavadigala gedde





ವಾದಿರಾಜರ ಮಹಿಮೆ ವರ್ಣಿಸಲರ್ಹನಲ್ಲಾ
ಮಾಧವ ವೇದವೇದ್ಯ ವಿಜಯವಿಠ್ಠಲ ತಾನು
ಆದರದಿಂದವರ ಭುಜದಿ ಹಯವಕ್ತ್ರನಾಗಿ
ಪಾದವನ್ನು ಇಟ್ಟು ಸ್ವಾದುವಾದ
ಕಡಲಿ ಹೂರಣವನು ಉಂಡ
ಶ್ರೀಧರನ ಮಹಿಮೆ ಸಾಧುಜನರು ಕೇಳಿ ||1||

Vadirajara mahime varnisalarhanalla
Madhava vedavedya vijayaviththala tanu
Adaradindavara Bujadi hayavaktranagi
Padavannu ittu svaduvada
Kadali huranavanu unda
Sridharana mahime sadhujanaru keli ||1||





ಕಡಲಲ್ಲಿ ಪವಡಿಸಿದ ಒಡಿಯ ತಾ ಪೊಡವಿಯಲಿ
ಮೃಡನುತ ಗೋವಿಂದ ಜಡದ ಹರಿವಾಣದಲ್ಲಿ
ಕಡಲಿ ಸಕ್ಕರೆ ಬೆರಿಸಿ ಲಡ್ಡುಗೆಯ ಮಾಡಿದ
ಸಡಗರದ ಭಕ್ಷ ಪಾಯಸ ಘೃತ ನೀಡೆ

Kadalalli pavadisida odiya ta podaviyali
Mrudanuta govinda jadada harivanadalli
Kadali sakkare berisi laddugeya madida
Sadagarada baksha payasa gruta nide





ಒಡೆಯನು ಬ್ರಹ್ಮಾದಿ ಪರಿವಾರ ಸಹಿತುಂಡು
ಕಡಗೋಲು ನೇಣು ಪಿಡಿದುಡುಪಿಲಿ ನಿಂದ
ಉಡುರಾಜಮುಖ ನಮ್ಮ ವಿಜಯ ವಿಠ್ಠಲನು
ಬೆಡಗು ಕಾರ್ಯವನ್ನು ನಡೆಸಿದ ಬಗೆ ಕೇಳಿ ||2||

Odeyanu brahmadi parivara sahitundu
Kadagolu nenu pididudupili ninda
Udurajamuka namma vijaya viththalanu
Bedagu karyavannu nadesida bage keli ||2||



3



ತಾಮಸಗುಣವುಳ್ಳ ಪಾಮರ ಜನರಿಗೆ
ಈ ಮಹಿಮೆ ದೊರಕುವದೇ ಸ್ವಾಮಿ ಸಿಲಕುವನೆ
ಕಾಮಿಸಿ ಕೋಟಿ ವರುಷ ನಾಮನುಡಿಯೆ ಪರಂ
ಧಾಮ ದೊರಿಯದು ಭೂಮಿಯೊಳಗಿದ್ದ

Tamasagunavulla pamara janarige
I mahime dorakuvude svami silakuvane
Kamisi koti varusha namanudiye param
Dhama doriyadu bumiyolagidda





ಭ್ರಾಮಕ ಜನರಿಗೆ ವಾಮದೇವನೆ
ಹಿರಿಯನೆಂದು ಬುದ್ಧಿಯಕೊಡುವ
ಕಾಮಾರಿ ವಂದ್ಯ ನಮ್ಮ ವಿಜಯ ವಿಠ್ಠಲನು
ಸಾಮಾನ್ಯ ಜನರಿಗೆ ದೊರಕುವನೆ ಕೇಳಿ ||3||

Bramaka janarige vamadevane
Hiriyanemdu buddhiyakoduva
Kamari vandya namma vijaya viththalanu
Samanya janarige dorakuvane keli ||3||





ಅಜ ಸತ್ಯಲೋಕಾಧಿಪತ್ಯವನ್ನು ಮಾಡಿ ದಿ
ಗ್ವಿಜಯ ಮಾಡಲು ಪುರಕೆ
ನಿಜಸುಜ್ಞಾನ ಪೂರ್ಣಪ್ರಜ್ಞರೆಂಬೋ ಮುನಿಯು
ಅಜಪದಕೆ ಬಂದು ಅಖಿಳರನಾಳಿದಾ
ನಿಜವಾಯು ಹನುಮ ಭೀಮ ಮಧ್ವನೆನಿಸಿದ

Aja satyalokadhipatyavannu madi di
Gvijaya madalu purake
Nijasuj~jana purnapraj~jarembo muniyu
Ajapadake bandu akilaranalida
Nijavayu hanuma bima madhvanenisida





ವಿಜಯಸಾರಥಿ ಪಾದರಜದ ಮಹಾತ್ಮೆಯಿಂದ
ಗಜವೈರಿ ಭಂಜನ ವಿಜಯವಿಠಲನ್ನ
ಭಜನಿಯ ಗೈಯುತ ಬಹುಕಾಲದಿ
ಋಜುಗಣ ಪಂಕ್ತಿಯೊಳಗೆ ಕುಳಿತಾ
ನಿಜ ನಿರ್ಮಲ ಸುಜ್ಞಾನ ಧ್ಯಾನದಿಂದ

Vijayasarathi padarajada mahatmeyimda
Gajavairi Banjana vijayavithalanna
Bajaniya gaiyuta bahukaladi
Rujugana panktiyolage kulita
Nija nirmala suj~jana dhyanadinda



4



ಜ್ಞಾನ ಪಕ್ವಾದ ಮಾನವುಳ್ಳ
ಸುಜನ ಶಿರೋಮಣಿ ವಾದಿರಾಜನು ತಾ
ನಿಜವಾಗಿ ಬೊಮ್ಮಾಂಡ ಪುರಾಣ ಸಾಧಕದಿಂದ
ಅಜಪದ ಸಲ್ವದು ಲೇಶ ಸಂಶಯಬೇಡಿ
ನಿಜ ನಿಜ ನಿಜವೆಂದು ನಿತ್ಯದಿ ಕೊಂಡಾಡಿ||4||

J~jana pakvada manavulla
Sujana siromani vadirajanu ta
Nijavagi bommanda purana sadhakadinda
Ajapada salvadu lesa samsayabedi
Nija nija nijavendu nityadi kondadi||4||





5

ಮನಶುದ್ಧರಾಗಿ ಮಾಧವನಂಫ್ರಿಯನು
ದಿನ ದಿನದಲ್ಲಿ ನಂಬಿ ಕೊಂಡಿಪ್ಪರೆ
ಅನವರತಾನಂದ ಗುರು ಮಧ್ವರಾಯರ ದಿವ್ಯ
ವನಜ ಪಾದಂಗಳ ಸ್ಮರಿಸಲು

Manasuddharagi madhavanangriyanu
Dina dinadalli nambi kondippare
Anavaratananda guru madhvarayara divya
Vanaja padamgala smarisalu






5

**ಹನುಮೇಶ ನಮ್ಮ ಸಿರಿ ವಿಜಯವಿಠ್ಠಲ ತಾನು**
**ಮುನಿವಾದಿರಾಜರು ಸಾಮಾನ್ಯರೆಂತೆಂದು**
**ಎಣಿಸಿದವರನ್ನು ಘನವಾಗಿ ಶಿಕ್ಷಿಪ**
**ಇನತನೂಧ್ಭವ ಕೋಪದಿಂದೀ ಕಾರಣ ಮಹಿಮೆ**
**ಯನು ಕೊಂಡಾಡಿ ಅನುದಿನ ಸುಜನರು ||5||**

Hanumesa namma siri vijayaviththala tanu
Munivadirajaru samanyarentendu
Enisidavarannu ganavagi sikshipa
Inatanudhbava kopadindi karana mahime
Yanu kondadi anudina sujanaru ||5||




ಮೋದ ತೀರ್ಥರ ಮತ ಸೇನಾಧಿಪತಿಯಾದ
ವಾದಿರಾಜ ಮುನಿಯು ವಿಜಯವಿಠ್ಠಲದಾಸಾ||6||
Moda tirtha mata senadhipatiyada
Vadiraja muniyu vijayaviththaladasa||6||